# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/90/2015–16 ದಿನಾಂಕ:19.05.2016

ಉಪಸ್ಥಿತರು:–ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| 1.ಹನುಮವ್ವ<br>2.ಯಮುನಪ್ಪ<br>3.ಗಂಗಮ್ಮ<br>4.ಪರಸಪ್ಪ ತಂದೆ ಲೇಟ್ ದೊಡ್ಡಪಕ್ಕೀರಪ್ಪ<br>ಗ್ರಾಮ:ಬಸರಕೋಡು ತಾ:ಹೆಚ್.ಬಿ.ಹಳ್ಳಿ | ಬಿ.ನೀಲಕಂಠಪ್ಪ ತಾಯಿ ಗಂಗಮ್ಮ<br>ಗ್ರಾಮ:ಕೋಗಳಿ ತಾ:ಹೆಚ್.ಬಿ.ಹಳ್ಳಿ |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಕೋಗಳಿ | 394/2 | 8–05 | ಖುಷ್ಕಿ |

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಕೋಗಳಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಬಸರಕೋಡು ಗ್ರಾಮದ ನಿವಾಸಿಯಾದ 1.ಹನುಮವ್ವ 2.ಯಮುನಪ್ಪ 3.ಗಂಗಮ್ಮ 4.ಪರಸಪ್ಪ ತಂದೆ ಲೇಟ್ ದೊಡ್ಡಪಕ್ಕೀರಪ್ಪ ಇವರು ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಅರ್ಜಿಯನ್ನು ದಿನಾಂಕ:18.11.2015 ರಂದು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ–21ರ ನೋಟೀಸನ್ನು ದಿನಾಂಕ:21.11.2015 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:21.12.2015 ರಂದು ಬಿ.ನೀಲಕಂಠಪ್ಪ ತಾಯಿ ಗಂಗಮ್ಮ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.20/15–16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿ:04.03.2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:04.03.2016 ರಿಂದ 19.05.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಅರ್ಜಿದಾರರು ಸತತವಾಗಿ ಗೈರುಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ಹೇಳುವಂತೆ; ಸದರಿ ಸ.ನಂ.394 ಮಾನ್ಯ ಸಿವಿಲ್ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ ದಾವೆ ಸಂಖ್ಯೆ ಒ.ಎಸ್.ನಂ 63/2013 ರನ್ವಯ ಪ್ರಕರಣ ನಡೆಯುತ್ತಿರುತ್ತದೆ ಎಂದು ಸದರಿ ದಾವೆಯ ನಕಲು ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

ಮುಂದುವರೆದು, ತಕರಾರುದಾರರು ಹೇಳುವಂತೆ; ಸದರಿ ಜಮೀನು ಈ ಹಿಂದೆ ನನ್ನ ಹೆಸರಿಗೆ ವಿಲ್ ಆಗಿರುತ್ತದೆ. ನೋಂದಾಯಿತ ವಿಲ್ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್.-3-00015-2007-2008 ದಿನಾಂಕ:24.08.2007 ರಂದು ಬಾರಿಕರ ಹುಲಿಗೆಮ್ಮ ಗಂಡ ದಿ:ಬಾರಿಕರ ಹನುಮಂತಪ್ಪ ಇವರಿಂದ ಬಾರಿಕರ ನೀಲಕಂಠಪ್ಪ ತಾಯಿ ಬಾರಿಕರ ಗಂಗಮ್ಮ ಇವರ ಹೆಸರಿಗೆ ವಿಲ್ ಆಗಿರುತ್ತದೆ. ಎಂದು ನೋಂದಾಯಿತ ವಿಲ್ ದಸ್ತಾವೇಜು ನಕಲು ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆಮಾಡಲಾಗಿ, ಸದರಿ ಜಮೀನಿಗೆ ಈ ಹಿಂದೆ ನೋಂದಾಯಿತ ವಿಲ್ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್.-3-00015-2007-2008 ದಿನಾಂಕ:24.08.2007 ರಂದು ಬಾರಿಕರ ಹುಲಿಗೆಮ್ಮ ಗಂಡ ದಿ:ಬಾರಿಕರ ಹನುಮಂತಪ್ಪ ಇವರಿಂದ ಬಾರಿಕರ ನೀಲಕಂಠಪ್ಪ ತಾಯಿ ಬಾರಿಕರ ಗಂಗಮ್ಮ ಇವರ ಹೆಸರಿಗೆ ವಿಲ್ ಆಗಿರುವುದು ಕಂಡುಬಂದಿರುತ್ತದೆ. ಹಾಗೂ ಮಾನ್ಯ ಸಿವಿಲ್ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ ದಾವೆ ಸಂಖ್ಯೆ ಒ.ಎಸ್.ನಂ 63/2013ರ ಪ್ರಕರಣವು ನಡೆಯುತ್ತಿರುವುದರಿಂದ ಉಭಯ ಪಕ್ಷಕಾರರು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ತಮ್ಮ ಹಕ್ಕನ್ನು ಸಾಭೀತುಪಡಿಸಿಕೊಂಡು ಪರಿಹಾರ ಕಂಡುಕೊಳ್ಳಲು ಈ ಕೆಳಕಂಡಂತೆ ಆದೇಶ;

**-:ಆದೇಶ:-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಮತ್ತು ಎಂ.ಆರ್.ನಂ.20/2015-16 ರ ಪ್ರಕಾರ, ಕೋಗಳಿ ಗ್ರಾಮದ ಸ.ನಂ.394/2 ವಿಸ್ತೀರ್ಣ 8-05 ಎಕರೆ ಜಮೀನಿಗೆ ಉಭಯ ಪಕ್ಷಕಾರರು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ತಮ್ಮ ಹಕ್ಕನ್ನು ಸಾಭೀತುಪಡಿಸಿಕೊಂಡು ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:19.05.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

19.5.16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

ಉಪ ತಹಶೀಲ್ದಾರರು
ನಾಡ ಕಛೇರಿ, ಕೋಗಳಿ

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಶುದ್ಧಪ್ರತಿ ಕಡತಕ್ಕೆ.